ಅವಮಾನತ್ತಿನಲ್ಲಿರುವ ಅವಶ್ಯಕತೆ ಕಂಡುಬರುವುದಿಲ್ಲ. ನಿರ್ದೇಶಕರಿಂದ ವಿವರವಾದ ವರದಿ ಹಾಗೂ ದೋಷಾರೋಪಣೆ ಪಟ್ಟಿ ಬೇಗ ತರಿಸಿ ವಿಚಾರಣಾ ಅಧಿಕಾರಿಯನ್ನು ಉಪಲೋಕಾಯುಕ್ತರ ಮೂಲಕ ನೇಮಿಸಲಾಗುವುದು.

೧೭) ಹಿರಿಯೂರು ತಾಲ್ಲೂಕಿನ ವಕ್ಕಲಿ ಗ್ರಾಮದಲ್ಲಿ ರಾಷ್ಟ್ರೀಯ ಎಣ್ಣೆಕಾಳು ಸಂಘದ ಅಧ್ಯಕ್ಷರು ಡಿಫಾಲ್ಟರ್ ಆಗಿದ್ದರೂ ಅದೇ ಹುದ್ದೆಯಲ್ಲಿ ಮುಂದುವರಿಯುತ್ತಿರುವುದರ ಬಗ್ಗೆ.

ಶ್ರೀ ಆರ್. ರಾಮಯ್ಯ.—ಮಾನ್ಯ ಅಧ್ಯಕ್ಷರೇ, ಹಿರಿಯೂರು ತಾಲ್ಲೂಕಿನ ಮಸ್ಕಲ್ ಗ್ರಾಮದಲ್ಲಿ ಇತ್ತೀಚೆಗೆ ''ರಾಷ್ಟ್ರೀಯ ಎಣ್ಣೆಕಾಳು ಅಭಿವೃದ್ಧಿ ಸಹಕಾರ ಸಂಘ'' ಹೊಂದು ತಲೆ ಎತ್ತಿದೆ. ಇದರ ಅಧ್ಯಕ್ಷರು ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕ್ ಬಿಂದರಲ್ಲಿ 'ಡಿಫಾಲ್ಟರ್' ಆಗಿದ್ದು ಸಹ ಸಂಘದ ಅಧ್ಯಕ್ಷರಾಗಿ ಮುಂದುವರಿಯುತ್ತಿರುವುದು ಸಹಕಾರ ಸಂಘಗಳ ನಿಯಮಕ್ಕೆ ವಿರುದ್ಧವಾಗಿದೆ. ಇದರ ವಿಚಾರಣೆಯನ್ನು ಸಮಯ ಕಳೆಯುವುದಕ್ಕಾಗಿಯೇ ವ್ಯವಸ್ಥೆ ಮಾಡಿದ ರಾಜಕೀಯ ಪ್ರಭಾವ ವಿದೆ. ಪ್ರಯುಕ್ತ ಸರ್ಕಾರ ಕೂಡಲೇ ಈ ಅಧ್ಯಕ್ಷರ ಪದಚ್ಯುತಿ ಆದೇಶಿಸಲು ಕೋರುತ್ತೇನೆ.

ಶ್ರೀ ಎಚ್. ವಿಶ್ವನಾಥಯ್ಯ (ಸಹಕಾರ ಮಂತ್ರಿಯವರು).—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿದ ಸಹಕಾರಿ ಸಂಘದ ಅಧ್ಯಕ್ಷರ ಅನರ್ಹತೆ ಬಗ್ಗೆ ವಿಚಾರಣೆ ನಡೆಯುತ್ತಿದೆ. ಅದರ ವಿಳಂಬಕ್ಕೆ ರಾಜಕೀಯ ಪ್ರಭಾವ ಕಾರಣ ಎಂದು ಹೇಳುವುದು ಸರಿಯಲ್ಲ. ನಿಯಮಾವಳಿಗಳನ್ನು ಅನುಸರಿಸಿ ವಿಚಾರಣೆ ಮಾಡಿ ತ್ವರಿತಗತಿಯಲ್ಲಿ ಅಂತಿಮ ತೀರ್ಮಾನ ಕೊಡಲು ಸೂಚನೆಯನ್ನು ಕೊಡುತ್ತೇನೆ.

೧೮) ರಾಜ್ಯದಿಂದ ಹೋಗುವ ಹಜ್ ಯಾತ್ರಿಕರಿಗೆ ಜಿಲ್ಲಾ ಆಸ್ಪತ್ರೆಗಳಿಂದ ಚುಚ್ಚು ಮದ್ದು ಹಾಕಿಸುವಂತೆ ವ್ಯವಸ್ಥೆ ಮಾಡುವುದರ ಬಗ್ಗೆ.

SRI MOHAMMED LAIQUDDIN.—Sir, the muslims from all over our State pay visit to holy cities of Mecca and Madina in the Kingdom of Shudi Arabia, during the period of their Haj Pilligrimage. All Hajis are required to get inoculations before starting for the performance of the Haj. This year the Government of Karnataka has made condition that all Hajis should get vaccinations and inoculations at Bangalore proper and then proceed to the holy places where the religious observances of Haj are offered.

The above condition is very hard, highly inconvenient and causes great harassment to the Hajis. The persons who are going to undertake Haj piligrimage from the Districts, viz. Bidar, Gulbarga, Raichur, Dharwar, Belgaum, Bijpur etc., which are far away from the capital city of Bangalore are also required to undergo the trial of getting inoculations at Bangalore. In this way they are forced not only to spend lot of money and energy, but also suffer great hardships. The travel for the ladies, aged and poor persons for the said purpose will amount to a sort of harassment and takes away all their physical strength and also causes mental irritation and exhaustion. I therefore sincerly urge upon the Government to remove the above unreasonably punitive

type of condition and extend inoculation facilities at all the District hospitals where a team of able and experienced doctors will always be available, which can easily perform the work of all sorts of inoculations of Hajis at the District headquarters only and the Hajis also may be allowed to get the inoculations at their respective district hospitals.

ಶ್ರೀ ಬಿ. ರಾಚಯ್ಯ (ಆರೋಗ್ಯ ಸಚಿವರು).—ಮಾನ್ಯ ಅಧ್ಯಕ್ಷರೇ, ಮೊನ್ನೆದಿವಸ ಮಾನ ಇದಿನಬ್ಬನವರ ಪ್ರಶ್ನೆಗೆ ಉತ್ತರ ಕೊಟ್ಟಿದ್ದೇನೆ.

ಕರ್ನಾಟಕ ರಾಜ್ಯದಿಂದ ಪ್ರತಿ ವರ್ಷವೂ ಹಾಜ್ ಯಾತ್ರೆಗೆ ಹೋಗುವವರು ಕಾಲರಾ ಚುಚ್ಚುಮದ್ದು ಪಡೆದು ಪಾತ್ರ ತೆಗೆದುಕೊಂಡು ಇಂಟರ್‌ನ್ಯಾಷನಲ್ ವ್ಯಾಕ್ಸಿನೇಟ್ ಸರ್ಟಿಫಿಕೇಟ್ ಪಡೆದುಕೊಳ್ಳಬೇಕಾಗಿತ್ತು. ಆದರೆ ಈ ವರ್ಷ ಈ ಯಾತ್ರೆಗೆ ಹೋಗುವವರು ಕಾಲರಾ ಚುಚ್ಚುಮದ್ದು ಪಾತ್ರ ಅಲ್ಲದೆ ಮೆನಿನ್‌ಜಿಟೀಸ್ ಚುಚ್ಚುಮದ್ದು ಕೂಡ ಹಾಕಿಸಿಕೊಳ್ಳಬೇಕೆಂದು ಸೌದಿ ಅರೇಬಿಯಾ ಸರ್ಕಾರ ಆದೇಶ ನೀಡಿದೆ ಎಂದು ಭಾರತ ಸರ್ಕಾರವು ತಿಳಿಸಿರುತ್ತದೆ. ಆದರ ಪ್ರಕಾರ ಮೆನಿನ್‌ಜಿಟೀಸ್ ಚುಚ್ಚುಮದ್ದು ಹಾಕಿಕೊಳ್ಳದೆ ಹೋಗುವ ಪ್ರವಾಸಿಗರನ್ನು ಸೌದಿ ಅರೇಬಿಯಾ ದೇಶಕ್ಕೆ ಹೋಗಲು ನಿಷೇದಿಸಿರುತ್ತದೆ. ಆದಕಾರಣ ಈ ಮೆನಿನ್‌ಜಿಟೀಸ್ ಚುಚ್ಚುಮದ್ದನ್ನು ತುರ್ತಾಗಿ ೨೫೦೦ ಡೋಸ್ ಗಳಷ್ಟು ಪ್ರಮಾಣದಲ್ಲಿ ನವದೆಹಲಿಯಿಂದ ಒಂದೂವರೆ ತಿಂಗಳ ಹಿಂದೆ ತರಿಸಿ ಹಾಜ್ ಯಾತ್ರಿಕರಿಗೆ ಬೆಂಗಳೂರಿನ ಸಾರ್ವಜನಿಕ ಆರೋಗ್ಯ ಸಂಸ್ಥೆಯಲ್ಲಿ ಚುಚ್ಚುಮದ್ದು ಕೊಡಲು ವ್ಯವಸ್ಥೆ ಮಾಡಲಾಗಿದೆ.

ಹಾಜ್ ಯಾತ್ರಿಕರು ಈ ಚುಚ್ಚುಮದ್ದನ್ನು ಬೆಂಗಳೂರಿನ ಸಾರ್ವಜನಿಕ ಆರೋಗ್ಯ ಸಂಸ್ಥೆಯಲ್ಲಿ ಹಾಕಿಸಿಕೊಂಡು ಸರ್ಟಿಫಿಕೇಟ್ ಪಡೆದುಕೊಳ್ಳಬೇಕೆಂದು ಕರ್ನಾಟಕ ರಾಜ್ಯ ಹಾಜ್ ಸಮಿತಿಯವರು ಎಲ್ಲಾ ಹಾಜ್ ಯಾತ್ರಿಕರಿಗೆ ಪತ್ರಿಕಾ ಪ್ರಕಟಣೆಗಳ ಮೂಲಕ ಹಾಗೂ ಲಿಖಿತ ಮೂಲಕ ತಿಳಿಸಲಾಗಿದೆ. ಈ ಚುಚ್ಚುಮದ್ದನ್ನು ಜಿಲ್ಲಾ ಆರೋಗ್ಯ ಕೇಂದ್ರಗಳಲ್ಲಿ ಕೊಡಲು ವ್ಯವಸ್ಥೆ ಮಾಡಬೇಕೆಂದು ಬೇಡಿಕೆಗಳು ಬಂದಿರುತ್ತವೆ. ಆದರೆ ಈ ಕೆಳಗೆ ನಮೂದಿಸಿರುವ ಕಾರಣಗಳಿಂದ ಆ ವ್ಯವಸ್ಥೆಯನ್ನು ಮಾಡಲಾಂ ತೊಂದರೆಯಾಯಿತು.

೧) ಈ ಮೆನಿನ್‌ಜಿಟೀಸ್ ಚುಚ್ಚುಮದ್ದು ಈ ರಾಜ್ಯಕ್ಕೆ ಸ್ವಲ್ಪ ಪ್ರಮಾಣದಲ್ಲಿ (೨೫೦೦ಡೋಸ್) ಮಾತ್ರ ಲಭಿಸಿರುತ್ತದೆ.

೨) ಈ ಚುಚ್ಚುಮದ್ದು ೫೦ ಎಂ.ಎಲ್. ಸೀಸೆಗಳಲ್ಲಿ ಶೇಖರಿಸಿದ್ದು, ಒಂದು ಸಲ ಈ ಸೀಸಿಯನ್ನು ತೆರೆದ ಕೂಡಲೆ ೮.೦೦ ಘಂಟೆ ಅವಧಿಯೊಳಗೆ ಉಪಯೋಗಿಸಬೇಕಾಗುತ್ತದೆ. ಮತ್ತು ೫೦ ಜನ ಯಾತ್ರಿಕರು ಸೇರಿದ್ದಲ್ಲಿ ಮಾತ್ರ ಈ ಸೀಸೆಯನ್ನು ತೆರೆಯಬೇಕಾಗುತ್ತದೆ. ಇಲ್ಲದಿದ್ದಲ್ಲಿ, ಈ ಅತೀಮೌಲ್ಯದ ಚುಚ್ಚುಮದ್ದು ವ್ಯರ್ಥವಾಗುವ ಸಂಭವವಿದೆ,

೩) ಈ ರಾಜ್ಯದಲ್ಲಿ ಇದನ್ನು ಪ್ರಥಮ ಬಾರಿ ಉಪಯೋಗಿಸುವುದರಿಂದ, ಅದರಿಂದ ಉಂಟಾಗುವ ತೊಡಕುಗಳು ಮತ್ತು ಅನರ್ಥಗಳನ್ನು ಎದುರಿಸಲಿಕ್ಕೆ ಮಾಡಬೇಕಾದ ವ್ಯವಸ್ಥೆಯನ್ನು ಜಿಲ್ಲಾ ಕೇಂದ್ರಗಳಲ್ಲಿ ತಕ್ಷಣ ಮಾಡಲು ಸಾಧ್ಯವಾಗಲಾರದು. ಈ ಕಾರಣಗಳಿಂದ ಈ ಚುಚ್ಚುಮದ್ದು ಅನ್ನು ಬೆಂಗಳೂರಿನಲ್ಲಿರುವ ಸಾರ್ವಜನಿಕ ಆರೋಗ್ಯ ಸಂಸ್ಥೆಯಲ್ಲಿ ಕೊಡುವುದಕ್ಕೆ ವ್ಯವಸ್ಥೆ ಮಾಡಲಾಗಿದೆ. ಈ ಪರಿಸ್ಥಿತಿಯಲ್ಲಿ ಎಲ್ಲಾ ಜಿಲ್ಲಾ ಕೇಂದ್ರ ಆಸ್ಪತ್ರೆಗಳಲ್ಲಿ ಈ ವ್ಯವಸ್ಥೆಯನ್ನು ಮಾಡಲು ಕಷ್ಟವಾಗುತ್ತದೆ.

ಅರಕ್ಷರ ಠಾಣೆಯಲ್ಲಿ ಕಸ ಗುಡಿಸುವವರ ಸಂಬಳವನ್ನು ಏರಿಸುವ ಬಗ್ಗೆ

ಶ್ರೀ ವಿನಯಕುಮಾರ್ ಸೊರಕೆ.—ಜೀತ ವಿಮುಕ್ತಿಗಾಗಿ ಪರಿಶ್ರಮಿಸಬೇಕಾದ ಸರಕಾರ ಸರ್ಕಾರಿ ಕಛೇರಿಗಳಲ್ಲಿಯೇ ಜೀತ ಪದ್ಧತಿಯನ್ನು ಮುಂದುವರಿಸುತ್ತಿದೆ ಎಂದರೆ ಅತಿಶಯೋಕ್ತಿಯಲ್ಲ, ಉದಾಹರಣೆಗೆ ಅರಕ್ಷಕರ ಠಾಣೆಗಳಲ್ಲಿ ಕಸಗುಡಿಸುವವರ ಸಂಬಳ ದಿನಕ್ಕೆ ಒಂದೇ ರೂಪಾಯಿ ತಿಂಗಳಿಗೆ ೩೦ ರೂಪಾಯಿ ಮಾತ್ರ. ವೇತನ ಹೆಚ್ಚಿಸಲು ಹಲವಾರು ವರ್ಷಗಳಿಂದ ಬೇಡಿಕೆ ಇದೆ. ಎಲ್ಲವೂ